ಮೊದಲನೇ ಚಂದಾ ನೊಬಲಗು ಪಾವತಿ ಮಾಡಿದ ತಾರೀಖು ಭೀಮಾ ಪತ್ರದ ತಾರೀಖಾಗಿ ಇರತಕ್ಕದ್ದು ಮತ್ತು ಭೀಮಾ ಪತ್ರವನ್ನು ಕೊಡುವದಕ್ಕೆ ಮುಂಚಿತವಾಗಿ ಸದರೀ ತಾರೀಖು ಭೀಮಾ ಪತ್ರವಲ್ಲಿ ಟ್ರೆಜರಿ ಆಫಿಸರಂದ ಸಮೂದಿಸಲ್ಪಡತಕ್ಕದ್ದು. ಬಂದು ಭೀಮಾ ಪತ್ರವು ಡಿಸ್ಟ್ರಿಕ್ಟು ಟ್ರೆಜರಿಯಿಂದಲಾಗಲಿ ಅಥವಾ ಅದು ಪಾವತಿ ಬಗ್ಯೆ ಕಳುಹಿಸಲ್ಪಟ್ಟಿರಬಹುದ್ದಾದಂಥಾ ತಾಲ್ಲೂಕು ಟ್ರೆಜರಿಯಿಂದಲಾಗಲಿ ಆದು ತಲಪಿದ ತಾರೀಖು ಲಾಗಾಯತು ಬಂದು ತಿಂಗಳ ವಳಗಾಗಿ ತೆಗದುಕೊಳ್ಳಲ್ಪಡದಿದ್ದರೆ ಆ ಸಂಗತಿಯು ಸೆಕ್ರಟರಿಯವರಿಗೆ ರಿಪೋರ್ಟು ಮಾಡಲ್ಪಡತಕ್ಕದ್ದು; ಅವರು ವರಿಜನರಿ ಮೆಡಿಕಲ್ ಸರ್ಟಿಫಿಕೇಟು ಹಾಜರ್ಮಾಡಲ್ಪಟ್ಟ ಕಾಲದಿಂದ ಆರು ತಿಂಗಳ ವಳಗಾಗಿ ಇದ್ದಪಕ್ಷದಲ್ಲಿ ಬಂದು ಸಾಧಾರಣ ಮೆಡಿಕಲ್ ಸರ್ಟಿಫಿಕೇಟ್ ಹಾಜರ್ಮಾಡುವಂತೆ ಭೀಮಾದಾರನಿಗೆ ಯೆಚ್ಚರಿಸತಕ್ಕದ್ದು.

ತಾರೀಖು 7ನೇ ಜನವರಿ 1896.

ನಂ. 5821.—ಫಾ. ಫೈ.—93—95.—ಫಾರೆಸ್ಟ್ ಡೆಪ್ಯುಟಿ ಕರ್ಣಸರ್ವೇಟರ್ ಮೆಸ್ಸರ್ ಸಿ. ಇ. ಯಂ. ರಸಲ್‌ಯವರು ಒಂದು ವರುಷದ ಪರಿಯಂತ ಬಗರ್ ತಲಬ್ ವಿಶೇಷ ರಜಾ ಕೊಡಲ್ಪಟ್ಟಿರುವದರಿಂದ; ಮೈಸೂರ ಡಿಸ್ಟ್ರಿಕ್ಟಿನ ಫಾರೆಸ್ಟ್ ಅಸಿಸ್ಟೆಂಟ್ ಕರ್ಣಸರ್ವೇಟರ್ ಮೆಸ್ಸರ್ ಬಿ. ಹಿಗಾಶಿಂಗ್‌ಯವರು, ಮೆಸ್ಸರ್ ರಸಲ್‌ಯವರು ರಜಾದಮೇಲೆ ಇರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ಪರಿಯಂತ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರಾಗಿ ಕೆಲಸ ನೋಡುವ ಬಗ್ಯೆ ಕಡೂರು ಡಿಸ್ಟ್ರಿಕ್ಟಿಗೆ ವರ್ಗಮಾಡಲ್ಪಟ್ಟಿರುತ್ತಾರೆ.

ತಾರೀಖು 9ನೇ ಜನವರಿ 1896.

ನಂ. 5945.—ರೆ. 2317.—ಹೊಳೇನರಸೀಪುರ ತಾಲ್ಲೂಕು ಅಮಲ್ದಾರ್ ಪಿ. ಸುಬ್ಬರಾಯಶಾಸ್ತ್ರಿಯವರಿಗೆ, ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 188ನೇ ಆರ್ಟಿಕಲ್ ಅನುಸರಿಸಿ, 1896ನೇ ಇಸವಿ ಜನವರಿ 1ನೇ ಮಾರ್ಚ್ಂ ಲಾಗಾಯತು ಯಾ ಆವರಿಗೆ ಉಪಯೋಗಿಸಿಕೊಂಡ ತಾರೀಖು ಮೊದಲು ಎರಡು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

2. ಸುಬ್ಬರಾಯಶಾಸ್ತ್ರಿಯವರು ರಜಾದಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಡೆಪ್ಯುಟಿ ಕಮಿಷನರವರ ಆಫಿಸ್ ಜುಡಿಷಲ್ ಹೆಡ್‌ಮುನಷಿ ಎಸ್. ಕೃಷ್ಣಪ್ಪನವರಿಗೆ ಹೊಳೇ ನರಸೀಪುರ ತಾಲ್ಲೂಕಿನ ಅಮಲ್ದಾರ್ ವ 3ನೇ ಕ್ಲಾಸಿ ಮಾಜಿಸ್ಟ್ರೇಟರಾಗಿ ಆಪ್ಟಿಂಗ್ ತರೀಕ್ ಮೊಕರರ್ಮಾಡಲ್ಪಟ್ಟಿರುತ್ತೆ.

ತಾರೀಖು 10ನೇ ಜನವರಿ 1896.

ನಂ. 6003.—ಫಾ. ಫೈ.—93-95.—ಷಿಕಾರಿಪುರದ ಸಬ್ ಡಿವಿಜ್ ಫಾರೆಸ್ಟ್ ಅಸಿಸ್ಟೆಂಟ್ ಕರ್ಣಸರ್ವೇಟರಾದ ಮೆಸ್ಸರ್ ಬಿ. ಶ್ರೀನಿವಾಸರಾಯರು, ಮೆಸ್ಸರ್ ಹಿಗೋಸಿಂಗ್‌ಯವರಿಗೆ ಛಾರ್ಜ್ ಒಪ್ಪಿಸುವ ತನಕ ಅಥವಾ ಮತ್ತೊಂದು ಹುಕುಂ ಕೊಡುವ ಪರಿಯಂತರ ಕಡೂರು ಡಿಸ್ಟ್ರಿಕ್ಟು ಫಾರೆಸ್ಟು ಛಾರ್ಜನ್ನು ಹಂಗಾಮಿತರೀಕು ವಹಿಸಿರತಕ್ಕದ್ದು.

2. ಫಾರೆಸ್ಟು ಯಕ್ಸಟ್ರಾ ಅಸಿಸ್ಟೆಂಟ್ ಕರ್ಣಸರ್ವೇಟರಾದ ಮೆಸ್ಸರ್ ಮಾಂಟೀರಿಯೋ ಯವರು, ಕಡೂರನಲ್ಲಿ ಮೆಸ್ಸರ್ ಶ್ರೀನಿವಾಸರಾಯರು ಇರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ಪರಿಯಂತರ ಷಿಕಾರಿಪುರದ ಸಬ್ ಡಿವಿಜನ್ನಿನ ಛಾರ್ಜನ್ನು ಹಂಗಾಮಿ ತರೀಕ್ ವಹಿಸಿ ಇರತಕ್ಕದ್ದು.

ಹುಕುಂ ಬಮೋಜೆಬ್,
ಸಿ. ಶ್ರೀನಿವಾಸಯ್ಯಂಗಾರ್,
ರೆವಿನ್ಯೂ ಸೆಕ್ರಟರಿ.

ಜನರಲ್.

ತಾರೀಖು 7ನೇ ಜನವರಿ 1896.

ನಂ. 7570.—ಮಿ. 1096.—ಫೆಬ್ರವರಿ ಗುರ್ಯೇ ತಾರೀಖು, ಮೈಸೂರು ಶ್ರೀಮತ್ ಮಹಾರಾಜರವರು ಪಟ್ಟಾಭಿಷಿಕ್ತರಾದ ಶುಭದಿನವಾದುದರಿಂದ ಆ ದಿನವು ಸಂಸ್ಥಾನಾವುಳಿ ವಟ್ಟು ರಜಾ ದಿವಸವೆಂದು ಆಚರಿಸಲ್ಪಡತಕ್ಕದ್ದು.

ತಾರೀಖು 8ನೇ ಜನವರಿ 1896.

ನಂ. 7590.—ಲೋ. ಫಂ. 21—92.—ಮೆಸರ್ಸು ಭೀಮರಾವ್ ಮತ್ತು ಚನ್ನಪ್ಪನವರು ನ್ಯಾಂತಿ ಮ್ಯುನಿಸಿಪಾಲಿಟಿಯ ಜಾಸ್ತೀ ಮೆಂಬರುಗಳಾಗಿ ಮೊಕರರ್ಮಾಡಲ್ಪಟ್ಟಿರುತ್ತಾರೆ.

ನಂ. 7629.—ಜು. 844.—ಬೆಂಗಳೂರು ಡಿಸ್ಟ್ರಿಕ್ಟು ಪೊಲೀಸ್ ಸೂಪರ್‌ಟೆಂಡೆಂಟರಾದ ಮೆಸ್ಸರ್ ಡಿ. ದೇವರಾಜೇ ಅರಸನವರಿಗೆ ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸಾರ, 1895ನೇ ಇಸವಿ ಡಿಸೆಂಬರ್ 16ನೇ ಮಾರ್ಚ್ಂ ಲಾಗಾಯತು ಐದು ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 7631.—ಜು. 846.—ತುಮಕೂರು ಡಿಸ್ಟ್ರಿಕ್ಟು ಪೊಲೀಸ್ ಅಸಿಸ್ಟೆಂಟ್ ಸೂಪರ್‌ಟೆಂಡೆಂಟ್ ಮೆಸ್ಸರ್ ಪಿ. ಎಫ್. ಬವರಿಂಗ್‌ಯವರಿಗೆ ಕೊಡಲ್ಪಟ್ಟ ಹತ್ತು ದಿವಸಗಳ ಕ್ಯಾಜುಯಲ್ ರಜಾ ಇದರ ದೆಸೆಯಿಂದ ಇನ್ನೂ ಒಂದು ವಾರದ ಪರಿಯಂತ ಜಾಸ್ತಿ ಮಾಡಲ್ಪಟ್ಟು ಸದರೀ ಹದಿನೇಳು ದಿವಸಗಳ ಪೂರಾ ರಜಾ ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 188ನೇ ಆರ್ಟಿಕಲ್ ಅನುಸರಿಸಿ, ಪ್ರಿವಿಲೀಜ್ ರಜುವಾಗಿ ಬದಲಾಯಿಸಲ್ಪಟ್ಟಿರುತ್ತೆ.

ನಂ. 7644.—ಜು. 854.—ಇದರಡಿ ಕಂಡ ಮುನಿಸಿಫರ್‌ಗಳ ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟಿರುತ್ತೆ:—

ಮುನಿಸಿಫರ ಹೆಸರು	ಯಿಂದಾ	ಗೆ
ಮೆಸ್ಸರ್ ಬಸವಾರಾಧ್ಯಾಯವರು	ಮದ್ದಗಿರಿ	ಸಾಗರ
ಮೆಸ್ಸರ್ ನರಸಿಂಗರಾಯರು	ಸಾಗರ	ಮದ್ದಗಿರಿ

ನಂ. 7113. — ಲೋ. ಫಂ. 102—95. 1894ನೇ ಇಸವಿಯ ಲ್ಯಾಂಡ್ ಅಕ್ವಿಜಿಷನ್ ರಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ, ಅದರಿಂದ ಪ್ರಕಟಪಡಿಸುವದೇನೆಂದರೆ, ಅದರಡಿ ಕೆಂಡ್ಯೂಲ್ಲಿಯಲ್ಲಿ ವಿವರಿಸಲ್ಪಟ್ಟ ಸುಮಾರು 57·18 ಎಕರೆವುಳ್ಳ ಜಮೀನುಗಳು ಸರ್ಕಾರದ ಕೆಲಸಕ್ಕೆ ಅಂದರೆ ಕಡೂರು ಡಿಸ್ಟ್ರಿಕ್ಟ್ ಕಡೂರು ತಾಲ್ಲೂಕಿನ ಬೀರೂರು ಟವನನ್ನು ಒಡಾಯಿಸುವ ಬಗ್ಯ ಬೇಕಾಗಿದೆ.

ಡಿಸ್ಟ್ರಿಕ್ಟ್	ತಾಲ್ಲೂಕು.	ಗ್ರಾಮ.	ಹಿಡುವಳಿದಾರನ ಹೆಸರು.	ಜಮೀನಿನ ತಪ್ಶೀಲು.				ಚಕ್ಕು ಬಂದಿ.
				ಸರ್ವೇ ನಂಬರು.	ವಿವರಣೆ.	ವಿಸ್ತೀರ್ಣ.	ಕಂದಾಯ.	
ಕಡೂರು.	ಕಡೂರು.	ಬೀರೂರು.	ವಿರುಪಯ್ಯನ ರುದ್ರಯ್ಯ ಖರೀದಿ ನಿಂಗಪ್ಪ	ಪೈಕಿ ನಂ. 36 ಡಿಟೋ 36	ಖುಷ್ಕಿ ಡಿಟೋ	4 17 7	5—8—0 8—8—0	ಪೂರ್ವಕ್ಕೆ — ಸರ್ವೆ ನಂಬರು 32, ಪಶ್ಚಿಮಕ್ಕೆ ಸರ್ವೇ ನಂಬರು 37, ಉತ್ತರಕ್ಕೆ ಬೀರೂರು ಟವನು, ದಕ್ಷಿಣಕ್ಕೆ ನಂಬರು 138, ಪಬ್ಲಿಕ್ ರಸ್ತೆ.
			ಕಪನಿ ಬಿ ನಿಂಗಪ್ಪ ಬ್ಯಾಲಿಗ ಬಿ ತಿರುಮಲಯ್ಯ	ಡಿಟೋ 37 ಡಿಟೋ 37	ಡಿಟೋ ಡಿಟೋ	3 30 3 26	4—8—0 4—8—0	ಪೂರ್ವಕ್ಕೆ — ಸರ್ವೇ ನಂಬರು 36, ಪಶ್ಚಿಮಕ್ಕೆ ಸರ್ವೇನಂಬರು 38, ಉತ್ತರಕ್ಕೆ ಬೀರೂರು ಟವನು, ದಕ್ಷಿಣಕ್ಕೆ ಪಬ್ಲಿಕ್ ರಸ್ತೆ.
			ಸಯ್ಯದ್ ಇಬ್ರಾಹಿಂಸಾಬ್	38	ಡಿಟೋ	4 15	5—0—0	ಪೂರ್ವಕ್ಕೆ — ನಂಬರು 37, ಪಶ್ಚಿಮಕ್ಕೆ ಪಬ್ಲಿಕ್ ರಸ್ತೆ, ಉತ್ತರಕ್ಕೆ ಬೀರೂರು ಟವನು, ದಕ್ಷಿಣಕ್ಕೆ ನಂಬರು 138.
			ವೆಂಕಟಸ್ವಯ್ಯ ವಿರುಪಯ್ಯನ ರುದ್ರಯ್ಯ	ಪೈಕಿ ನಂ. 39 ಡಿಟೋ 39	ಡಿಟೋ ಡಿಟೋ	28 27	1—0—0 0—12—0	ಪೂರ್ವಕ್ಕೆ — ಸರ್ವೇ ನಂಬರು 38, ಪಶ್ಚಿಮಕ್ಕೆ ಸರ್ವೇ ನಂಬರು 39, (ಕಟ್ಟೆ), ಉತ್ತರಕ್ಕೆ ಬೀರೂರು ಟವನು, ದಕ್ಷಿಣಕ್ಕೆ ಸರ್ವೇ ನಂಬರು 40.
			ನಾಗಯ್ಯ ರಾಮಂಣ	41	ಡಿಟೋ	6 37	8—8—0	ಪೂರ್ವಕ್ಕೆ — ರಸ್ತೆ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಸರ್ವೇ ನಂಬರು 40, ದಕ್ಷಿಣಕ್ಕೆ ರಸ್ತೆ.
			ಈರಯ್ಯ	31	ಡಿಟೋ	8 38	12—0—0	ಪೂರ್ವಕ್ಕೆ — ಕಾವಲು, ಪಶ್ಚಿಮಕ್ಕೆ ಬೀರೂರು ಟವನು, ಉತ್ತರಕ್ಕೆ ಕಾವಲು, ದಕ್ಷಿಣಕ್ಕೆ ಸರ್ವೆ ನಂಬರು 32.
			ಹಾಲಪ್ಪ ವೀರತ್ತಯ್ಯ ಸರ್ಕಾರಿ ಬಂಜರು	ಪೈಕಿ ನಂ. 32 ಡಿಟೋ 33 53	ಡಿಟೋ ಡಿಟೋ ಡಿಟೋ	6 5 6 15 4 20	8—0—0 8—0—0 4—0—0	ಪೂರ್ವಕ್ಕೆ — ಕಾವಲು, ಪಶ್ಚಿಮಕ್ಕೆ ಸರ್ವೇ ನಂಬರು 36, ಉತ್ತರಕ್ಕೆ ಸರ್ವೇ ನಂಬರು 31, ದಕ್ಷಿಣಕ್ಕೆ ಕಾವಲು. ಪೂರ್ವಕ್ಕೆ — ರೈಲ್ ರಸ್ತೆ, ಪಶ್ಚಿಮಕ್ಕೆ ಪಬ್ಲಿಕ್ ರಸ್ತೆ, ಉತ್ತರಕ್ಕೆ ಸರ್ವೇ ನಂಬರು 105, ದಕ್ಷಿಣಕ್ಕೆ ಸರ್ವೇ ನಂಬರು 49 (ಕಟ್ಟೆ).
						57 18	70—4—0	

ಹುಕುಂ ಬವೋಜೇಬ್,
ವಿ. ಎ. ನರಸಿಂಹಯ್ಯಂಗಾರ್,
ಜನರಲ್ ಸೆಕ್ರಟರಿ.

ಮೈಸೂರು ಗೆಜೆಟ್, ಜನವರಿ ತಾ॥ 16, ಸಂ॥ 1896. 18 11ನೇ ಭಾಗ.